1) ಮೆ: ಸಿದ್ದೇಶ್ವರ ಶುಗರ್ಸ್ ಲಿ., ಇವರ ಸಕ್ಕರೆ ಕಾರ್ಖಾನೆ ಯೋಜನೆಗಾಗಿ ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ತೆಲಗಿ ಮತ್ತು ಅಂಗಡಗೇರಿ ಗ್ರಾಮಗಳಲ್ಲಿ ಒಟ್ಟು 130–05 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ದಿನಾಂಕ 15–10–2008 ರಂದು ಕಲಂ 28(4) ರಡಿ ಕೆ.ಐ.ಎ.ಡಿ.ಬಿ. ಅಂತಿಮ ಅಧಿಸೂಚನೆ ಹೊರಡಿಸಿದೆ.

2) ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕು ನಾಡಕೇಡ್ ಗ್ರಾಮದಲ್ಲಿ ಮೆ. ಜಮಖಂಡಿ ಶುಗರ್ಸ್ ಲಿ., ಇವರ ಸಕ್ಕರೆ ಕಾರ್ಖಾನೆ ಯೋಜನೆಗಾಗಿ ಒಟ್ಟು 88.33 ಎಕರೆ ಜಮೀನನ್ನು ಸ್ವಾಧೀನಪಡಿಸಲು ದಿನಾಂಕ 15–12–2011 ರಂದು ಕಲಂ 28(4) ರಡಿ ಕೆ.ಐ.ಎ.ಡಿ.ಬಿ ಅಂತಿಮ ಅಧಿಸೂಚನೆ ಹೊರಡಿಸಿದೆ. ಇದಲ್ಲದೆ, ಕಂಪನಿಯ ಯೋಜನೆಯ ಆಯಕಟ್ಟಿಗೆ ಹೊಂದಾಣಿಕೆಯಾಗುವಂತೆ 18 ಎಕರೆ 37 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕೆಐಎಡಿ ಕಾಯ್ದೆ ಕಲಂ 3(1), 1(3) ಮತ್ತು 28(1) ರಡಿ ದಿನಾಂಕ 15–12–2011 ರಂದು ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಕಬ್ಬು ಬೆಳೆಗಾರರ ಬಾಕಿ ಹಣ ಪಾವತಿ

237 (612) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ):– ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಕಬ್ಬು ಬೆಳೆಗಾರರಿಗೆ ರಾಜ್ಯಾದ್ಯಂತ ಏಕ ನೀತಿ ಕಾನೂನು ತರಲು ಇರುವ ತೊಂದರೆಗಳೇನು ?

ಆ) ವಿವಿಧ ಕಾರ್ಖಾನೆಗಳಿಂದ ಕಬ್ಬು ಪೂರೈಸಿದ ರೈತರಿಗೆ ಬರಬೇಕಾದ ಹಣ ಪಾವತಿಯಾಗದೆ ಸಂಕಷ್ಟದಲ್ಲಿರುವ ರೈತರಿಗೆ ಸರ್ಕಾರ ಕಾರ್ಖಾನೆಗಳಿಂದ ಬಾಕಿ ಹಣ ಒದಗಿಸಲು ಯಾವ ಕ್ರಮ ಕೈಗೊಂಡಿದೆ ?

ಶ್ರೀ ಎಸ್. ಎ. ರವೀಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು):–

ಅ) ಕಬ್ಬು (ನಿಯಂತ್ರಣ) ಆದೇಶ 1966ರ ಕಲಂ 3 ರಡಿಯಲ್ಲಿ ರಾಷ್ಟ್ರಾದ್ಯಂತ ಕಬ್ಬಿಗೆ ಏಕ ರೂಪ ಬೆಲೆಯನ್ನು ಕೇಂದ್ರ ಸರ್ಕಾರವು ನಿಗದಿಪಡಿಸುತ್ತದೆ. 2011–12ನೇ ಸಾಲಿಗೆ ಶೇ. 9.5ರ ಇಳುವರಿ ಕಬ್ಬಿಗೆ ರೂ. 145/– ಪ್ರತಿ ಕ್ವಿಂಟಾಲಿಗೆ ನಿಗದಿಪಡಿಸಿದ್ದು, ಪ್ರತಿ 0.1% ಹೆಚ್ಚುವರಿ ಇಳುವರಿಗೆ ರೂ. 1.53 ರಂತೆ ಹೆಚ್ಚುವರಿಯಾಗಿ ಪಾವತಿಸಲು

ನಿಗದಿಯಾಗಿರುತ್ತದೆ. ಹಿಂದಿನ ವರ್ಷದ ಸಕ್ಕರೆ ಇಳುವರಿ ಆಧಾರದ ಮೇಲೆ ಪ್ರತಿ ಕಾರ್ಖಾನೆಗೆ (Fair and Remunerative Price) ದರವನ್ನು ಕೇಂದ್ರ ಸರ್ಕಾರವು ನಿಗದಿಪಡಿಸುತ್ತದೆ. ಕೇಂದ್ರ ಸರ್ಕಾರವು ನಿಗದಿಪಡಿಸಿದ FRP ದರವು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಒಳಗೊಂಡಿರುತ್ತದೆ. ಉತ್ತರ ಕರ್ನಾಟಕದಲ್ಲಿ ಸಕ್ಕರೆ ಇಳುವರಿ ಪ್ರಮಾಣವು ರಾಜ್ಯದ ಇತರೆ ಭಾಗಗಳಿಗಿಂತ ಹೆಚ್ಚಿಗೆ ಇರುವುದರಿಂದ ಕಟಾವು ಮತ್ತು ಸಾಗಾಣಿಕೆ ದರವನ್ನು ಕಾರ್ಖಾನೆಗಳೇ ಭರಿಸಿ ಹೆಚ್ಚುವರಿ ಇಳುವರಿಯ ಲಾಭವನ್ನು ರೈತರಿಗೆ ವರ್ಗಾವಣೆ ಮಾಡುತ್ತದೆ. ಈ ಬೆಲೆಯು ಆಯಾ ಕಾರ್ಖಾನೆಗಳು ಮತ್ತು ಕಬ್ಬು ಬೆಳೆಗಾರರು ಪರಸ್ಪರ ಒಪ್ಪಂದ ಮಾಡಿಕೊಂಡ ಪ್ರಕಾರ ಇರುತ್ತವೆ. ಕರ್ನಾಟಕ ರಾಜ್ಯದಲ್ಲಿ ಕಬ್ಬಿಗೆ ನೀಡುತ್ತಿರುವ ಬೆಲೆಯು ಕೇಂದ್ರ ಸರ್ಕಾರವು ನಿಗದಿ ಮಾಡಿದ FRP ದರಕ್ಕಿಂತಲೂ ಹೆಚ್ಚಿಗೆ ಇರುತ್ತದೆ.

ಆ) ದಿನಾಂಕ 15–01–2012 ರಲ್ಲಿದ್ದಂತೆ ರಾಜ್ಯದ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಬೇಕಾದ ಬಾಕಿ ವಿವರ ಈ ಕೆಳಕಂಡಂತೆ ಇರುತ್ತದೆ.

(ರೂ. ಕೋಟಿಗಳಲ್ಲಿ)

2011–12ನೇ ಸಾಲಿನ ಬಾಕಿ	ಹಿಂದಿನ ಬಾಕಿ	ಒಟ್ಟು
1209.19	59.09	1268.28

ವಿವಿಧ ಕಾರ್ಖಾನೆಗಳಿಂದ ಕಬ್ಬು ಪೂರೈಸಿದ ರೈತರಿಗೆ ಬರಬೇಕಾದ ಹಣ ಪಾವತಿ ಮಾಡಲು ಕಬ್ಬು (ನಿಯಂತ್ರಣ) ಆದೇಶ 1966ರ ಕಲಂ 3(8)ರ ಅಡಿಯಲ್ಲಿ ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಾತಿ ಮಾಡಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ವಸೂಲಾತಿ ಪ್ರಮಾಣ ಪತ್ರ (Recovery Certificate) ನೀಡಲಾಗುತ್ತಿದೆ. ಈ ಕೆಳಕಂಡ ಕಾರ್ಖಾನೆಗಳಿಂದ ಬರಬೇಕಾದ ಹಿಂದಿನ ವರ್ಷಗಳ ಕಬ್ಬು ಬಿಲ್ ಬಾಕಿ ವಸೂಲಾತಿಗೆ ಪ್ರಮಾಣ ಪತ್ರ ನೀಡಲಾಗಿರುತ್ತದೆ.

ಕ್ರ. ಸಂ.	ಸಕ್ಕರೆ ಕಾಖಾನೆಯ ಹೆಸರು	ಹಿಂದಿನ ವರ್ಷಗಳ ಕಬ್ಬು ಬಿಲ್ ಬಾಕಿ ಮೊತ್ತ (ರೂ. ಕೋಟಿಗಳಲ್ಲಿ)
1	ಬಾದಾಮಿ ಶುಗರ್ಸ್ ಲಿ., ಮುಷ್ಠಿಗೇರಿ, ಬಾದಾಮಿ ತಾ, ಬಾಗಲಕೋಟೆ ಜಿಲ್ಲೆ	7.00

2	ಕೇದಾರ್‌ನಾಥ್ ಶುಗರ್ಸ್ ಅಂಡ್ ಅಗ್ರೋ ಪ್ರಾಡಕ್ಟ್ಸ್ ಲಿ., ಗಂಗನಬೂದಿಹಾಳ, ಬಾದಾಮಿ ತಾ, ಬಾಗಲಕೋಟೆ ಜಿಲ್ಲೆ	34.46
3	ಗ್ಯಾನಬಾ ಶುಗರ್ಸ್ ಅಂಡ್ ಡೆವಲಪರ್ಸ್ ಲಿ, (ಗುತ್ತಿಗೆದಾರರು ಭದ್ರಾ ಸಹಕಾರಿ ಸಕ್ಕರ ಕಾರ್ಖಾನೆ ನಿ,) ದೊಡ್ಡಬಾತಿ, ದಾವಣಗೆರೆ ಜಿಲ್ಲೆ	4.31
4	ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ನಿ, ಬ್ರಹ್ಮಾವರ, ಉಡುಪಿ	1.92
5	ಜ್ಞಾನಯೋಗಿ ಶ್ರೀ ಶಿವಕುಮಾರ ಸ್ವಾಮೀಜಿ ಶುಗರ್ಸ್ ಲಿ, ಹಿರೇಬೇವನೂರು, ಇಚಡಿ ತಾ, ಬಿಜಾಪುರ ಜಿಲ್ಲೆ	1.87
6	ನಾರಂಜಾ ಸಹಕಾರಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ, ಇಮಾಂಮ್‌ಪುರ, ಬೀದರ್ ಜಿಲ್ಲೆ	9.30
	ಒಟ್ಟು	58.86

ಕೃಷಿ ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸಿರುವ ಯೋಜನೆಗಳು

239 (181) ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ):– ಕೃಷಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕಳೆದ ಮೂರು ವರ್ಷಗಳಿಂದ ಈವರೆಗೆ ಬೀದರ್ ಜಿಲ್ಲೆಯಲ್ಲಿ ಕೃಷಿ ಇಲಾಖೆಯವತಿಯಿಂದ ಅನುಷ್ಠಾನಗೊಳಿಸಿರುವ ಯೋಜನೆಗಳು ಎಷ್ಟು ಮತ್ತು ಯಾವುವು ;

ಆ) ಈ ಯೋಜನೆಗಳಿಗೆ ಸರ್ಕಾರ ಇದುವರೆವಿಗೂ ವೆಚ್ಚ ಮಾಡಿರುವ ಮೊತ್ತವೆಷ್ಟು ? (ತಾಲ್ಲೂಕು ಮತ್ತು ಯೋಜನೆಗಳವಾರು ವಿವರಗಳನ್ನು ನೀಡುವುದು)

ಇ) ಪ್ರಸ್ತುತ ಸಾಲಿನಲ್ಲಿ ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಯಾವ ಯಾವ ಯೋಜನೆಗಳನ್ನು ಕೈಗೆತ್ತಿಗೊಳ್ಳಲು ಉದ್ದೇಶಿಸಲಾಗಿದೆ ;

ಈ) ಈ ಯೋಜನೆಗಳಿಗೆ ಸರ್ಕಾರ ನಿಗದಿಪಡಿಸಿರುವ ಅನುದಾನದ ಮೊತ್ತವೆಷ್ಟು? (ವಿವರಗಳನ್ನು ನೀಡುವುದು)